ಓ.ಎಸ್ಃ 285/2013
ಪಿ.ಡಬ್ಲ್ಯೂಃ 01
**ತಿಪ್ಪಣ್ಣ**

<u>ದಿನಾಂಕಃ **22-09-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>

<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಜಿ.ಬಿ.ಬಿ ವಕೀಲರಿಂದಃ</u>

**2.** ಸರ್ವೆ ನಂಬರ 55 ರ ಜಮೀನಿನಲ್ಲಿ 6 ಪಟ್ಟಿಗಳಾಗಿವೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 6 ಪಟ್ಟಿಗಳಾಗಿದ್ದು, ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ಎಲ್ಲರೂ ಕೆನಾಲ್ ಪಕ್ಕದಲ್ಲಿರುವ ರಸ್ತೆಯನ್ನು ಬಳಸಿಯೇ ತಮ್ಮ ಜಮೀನುಗಳಿಗೆ ಹೋಗುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಿಃ10.09.1994 ರಂದು ಯಾವುದೇ ಕಬುಲಾತಿ ಪತ್ರವನ್ನು ನಮ್ಮ ಮನೆತನಕ್ಕೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

**3.** ವಾಟ್ನಿಯ ನಂತರ ಈವರಗೊ ಯಾವ ಸಮಯದಲ್ಲಿಯೂ ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ ನಾವು ದನ ಕರುಗಳನ್ನಾಗಲೀ ವಾಹನಗಳಾನ್ನಾಲೀ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಅನಾದಿ ಕಾಲದದಿಂದಲೂ ರಸ್ತೆಯನ್ನಾಗಿ ಬಳಸಿ ನಾವು ನಮ್ಮ ಜಮೀನುಗಳಿಗೆ ಹೋಗುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆನಾಲ್‌ನ ಎರಡು ಬದಿಯಲ್ಲಿಯೂ ರಸ್ತೆಗಳಿವೆ ಎಂದರೆ ಸರಿಯಲ್ಲ. ಕೆನಾಲ್‌ನ ಪಶ್ಚಿಮ ದಿಕ್ಕಿನಲ್ಲಿ ರಸ್ತೆಯಿದ್ದು, ಅಲ್ಲಿ ನಾನು ಗುಡಿಸಲು ಕಟ್ಟಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**4.** ನಾನು ಪ್ರತಿವಾದಿಯನ್ನು ಯಾವಾ ದಿನಾಂಕದಂದು ರಸ್ತೆ ಕೇಳಿದ್ದೇನೆ ಎಂದು ನೆನಪಿಲ್ಲ. ಪ್ರತಿವಾದಿಯ ಜಮೀನಿನ ಸರ್ವೆ ನಂಬರ 55.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,**
**ಬಸವನ ಬಾಗೇವಾಡಿ.**